# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 515 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 30.01.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ; ಇದರಲ್ಲಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಎಷ್ಟು; ಈ ವಿದ್ಯಾರ್ಥಿ ನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ; ಇದರಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆ ಎಷ್ಟು;</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1245 ಮೆಟ್ರಿಕ್ ಪೂರ್ವ ಹಾಗೂ 1414 ಮೆಟ್ರಿಕ್ ನಂತರದ ಹೀಗೆ ಒಟ್ಟು 2659 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.
<table>
<tr><th rowspan="2">ಕ್ರ ಸಂ</th><th rowspan="2">ವಿವರ</th><th colspan="3">ವಿದ್ಯಾರ್ಥಿನಿಲಯಗಳ ಸಂಖ್ಯೆ</th><th colspan="3">ವಿದ್ಯಾರ್ಥಿನಿಲಯಗಳ ಮಂಜೂರಾತಿ ಸಂಖ್ಯೆ</th><th colspan="3">ಪ್ರವೇಶ ಪಡೆದ ವಿದ್ಯಾರ್ಥಿಗಳಸಂಖ್ಯೆ</th></tr>
<tr><th>ಬಾಲಕರು</th><th>ಬಾಲಕಿಯರು</th><th>ಒಟ್ಟು</th><th>ಬಾಲಕರು</th><th>ಬಾಲಕಿಯರು</th><th>ಒಟ್ಟು</th><th>ಬಾಲಕರು</th><th>ಬಾಲಕಿಯರು</th><th>ಒಟ್ಟು</th></tr>
<tr><td>1</td><td>ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳು</td><td>965</td><td>280</td><td>1245</td><td>51792</td><td>15511</td><td>67303</td><td>48814</td><td>15302</td><td>64116</td></tr>
<tr><td>2</td><td>ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳು</td><td>664</td><td>750</td><td>1414</td><td>85664</td><td>97674</td><td>183338</td><td>77075</td><td>90571</td><td>167646</td></tr>
<tr><td></td><td>ಒಟ್ಟು</td><td>1629</td><td>1030</td><td>2659</td><td>137456</td><td>113185</td><td>250641</td><td>125889</td><td>105873</td><td>231762</td></tr>
</table></td></tr>
<tr><td>ಆ)</td><td>ತೃತೀಯ ಲಿಂಗಗಳಿಗೂ ಈ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶಾವಕಾಶ ಇದೆಯೇ; ತೃತೀಯ ಲಿಂಗಗಳಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಇದೆಯೇ; ಈಗಿರುವ ಬೇಡಿಕೆಗೆ ಅನುಗುಣವಾಗಿ ಹಿಂದುಳಿದ ವರ್ಗಗಳ ಜನಸಂಖ್ಯೆಯ ಎಷ್ಟು ಪ್ರಮಾಣ ಹಾಸ್ಟೆಲ್ ಸೌಲಭ್ಯ ಹೊಂದಿದೆ;</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ತೃತೀಯ ಲಿಂಗಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡುವ ಬಗ್ಗೆ ಯಾವುದೇ ಪ್ರಸ್ತಾಪವಿರುವುದಿಲ್ಲ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ತೃತೀಯ ಲಿಂಗಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಇರುವುದಿಲ್ಲ.<br><br>ಕರ್ನಾಟಕ ರಾಜ್ಯವು ಒಟ್ಟು 6.85 ಕೋಟಿ ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ ಸುಮಾರು ಶೇ.69.50 ರಷ್ಟು ಅಂದರೆ 4.76 ಕೋಟಿ ಜನಸಂಖ್ಯೆ ಹಿಂದುಳಿದ ವರ್ಗಗಳ ಜನಾಂಗದವರಿರುತ್ತಾರೆ. ಇದರಲ್ಲಿ ಶಿಕ್ಷಣ ಪಡೆಯುತ್ತಿರುವ, ಅಂದರೆ 6 ರಿಂದ 25 ವರ್ಷದವರೆಗಿನ ವಯಸ್ಸಿನವರು ಸುಮಾರು ಶೇ.20% ರಷ್ಟು ಅಂದರೆ 95.20 ಲಕ್ಷ ಇರುತ್ತಾರೆ.</td></tr>
</table>

<table>
<tr>
<td></td>
<td>ಪೂರ್ಣವಾಗಿ ಬೇಡಿಕೆಯನ್ನು ಈಡೇರಿಸಲು/ಒಂದು ಹಂತಕ್ಕೆ ಮುಟ್ಟಲು ಎಷ್ಟು ಪ್ರಮಾಣಕ್ಕೆ ಹಾಸ್ಟೆಲ್ ಸಂಖ್ಯೆಯನ್ನು ಏರಿಸಬೇಕು; ಇದಕ್ಕಾಗಿ ಬೇಕಾಗುವ ಹಾಸ್ಟೆಲ್‌ಗಳ ಒಟ್ಟು ಸಂಖ್ಯೆ ಎಷ್ಟು;</td>
<td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಪ್ರಸ್ತುತ 2659 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಿದ್ಯಾರ್ಥಿನಿಲಯಗಳಲ್ಲಿ 250641 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗಿರುತ್ತದೆ. ಈ ಸಂಖ್ಯೆಯು ಒಟ್ಟು ವಿದ್ಯಾಭ್ಯಾಸ ಮಾಡುತ್ತಿರುವ ಹಿಂದುಳಿದ ವರ್ಗಗಳ ಜನಸಂಖ್ಯೆಯ ಶೇ.2.63 ರಷ್ಟು ಇರುತ್ತದೆ. ಶಿಕ್ಷಣ ಪಡೆಯುತ್ತಿರುವ ಹಿಂದುಳಿದ ವರ್ಗಗಳ ಶೇಕಡಾ 5 ರಷ್ಟಾದರು ಮಕ್ಕಳಿಗೆ ವಿದ್ಯಾರ್ಥಿನಿಲಯದ ಅವಶ್ಯಕತೆಯಿರುತ್ತದೆ. ಈ ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಸೌಲಭ್ಯ ಕಲ್ಪಿಸಲು ಹೆಚ್ಚುವರಿಯಾಗಿ 100 ಸಂಖ್ಯಾಬಲದ ಸುಮಾರು 2253 ವಿದ್ಯಾರ್ಥಿನಿಲಯಗಳ ಅವಶ್ಯಕತೆಯಿರುತ್ತದೆ.<br><br>ವಿದ್ಯಾರ್ಥಿನಿಲಯಗಳ ಬೇಡಿಕೆಯನ್ನು ಹಂತ ಹಂತವಾಗಿ ಈಡೇರಿಸಲು ಕ್ರಮಕೈಗೊಳ್ಳಲಾಗಿದ್ದು, 150 ಸಂಖ್ಯಾಬಲದ 300 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ, 2026-27ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲು ಉದ್ದೇಶಿಸಲಾಗಿದೆ.</td>
</tr>
<tr>
<td></td>
<td>2023-24, 2024-25, 2025-2026ರಲ್ಲಿ ಸಾಲುಗಳಲ್ಲಿ ಎಷ್ಟು ಹಿಂದುಗಳಿದ ವರ್ಗಗಳ ಹಾಸ್ಟೆಲ್ ನಿರ್ಮಾಣವಾಗಿವೆ;<br>ಪೂರ್ಣಗೊಂಡು ಹಸ್ತಾಂತರವಾಗಿವೆಯೇ; ಈಗಿರುವ ಒಟ್ಟು OBC ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು; ಈ ಎಲ್ಲಾ ಹಾಸ್ಟೆಲ್‌ಗಳ ಸ್ಥಿತಿ-ಗತಿ ಪರಿಶೀಲಿಸಲಾಗಿದೆಯೇ; ಅದರ ರಿಪೇರಿ ಕಾರ್ಯಕ್ಕೆ ಎಷ್ಟು ಹಣ ದೊರೆತಿದೆ; ಒಂದೇ ಬಾರಿಗೆ ಈಗಿರುವ ಎಲ್ಲಾ ಹಾಸ್ಟೆಲ್ ಗಳನ್ನೂ ಏಕಕಾಲದಲ್ಲಿ ಸುಸ್ಥಿತಗೊಳಿಸಲು ಎಷ್ಟು ಹಣ ಬೇಕಾಗಿದೆ;</td>
<td>2023-24, 2024-25 ಮತ್ತು 2025-26ನೇ ಸಾಲುಗಳಲ್ಲಿ ಒಟ್ಟು 129 ಹೊಸ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಇವುಗಳ ನಿರ್ಮಾಣ ಕಾರ್ಯದ ವಿವರಗಳು ಈ ಕೆಳಕಂಡಂತಿವೆ.
<table>
<tr><th>ವರ್ಷ</th><th>ಮಂಜೂರಾದ ಕಾಮಗಾರಿಗಳ ಸಂಖ್ಯೆ</th><th>ಪ್ರಗತಿ ವಿವರ</th></tr>
<tr><td>2023-24</td><td colspan="2">ಯಾವುದೇ ಹೊಸ ಕಟ್ಟಡ ನಿರ್ಮಾಣ ಕಾರ್ಯ ಕೈಗೊಂಡಿರುವುದಿಲ್ಲ.</td></tr>
<tr><td>2024-25</td><td>79</td><td>79 ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ</td></tr>
<tr><td>2025-26</td><td>50</td><td>50 ಕಾಮಗಾರಿಗಳ ಪೈಕಿ 20 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>ಇನ್ನುಳಿದ 30 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆಯ ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು ಅಂದಾಜು ಪಟ್ಟಿಗಳನ್ನು ಸಲ್ಲಿಸಿದ್ದು, ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.</td></tr>
</table>
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಪ್ರಸ್ತುತ 2659 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 1644 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ, 271 ಉಚಿತ ಕಟ್ಟಡಗಳಲ್ಲಿ ಮತ್ತು 744 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.</td>
</tr>
</table>

| | | |
|---|---|---|
| | | 2025-26ನೇ ಸಾಲಿನಲ್ಲಿ ಜಿಲ್ಲಾವಲಯ ಲೆಕ್ಕಶೀರ್ಷಿಕೆ 2225-00-103-0-40-ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ವಹಣೆ ಕಾರ್ಯಕ್ರಮದಡಿ ರೂ.20.00 ಕೋಟಿಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಜಿಲ್ಲಾವಾರು ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನುಸಾರ ವಿದ್ಯಾರ್ಥಿನಿಲಯ ಕಟ್ಟಡಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br><br>2022-23ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಕಟ್ಟಡ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.150.00 ಕೋಟಿಗಳನ್ನು ಒದಗಿಸಲಾಗಿದ್ದು, ಒದಗಿಸಿದ ಅನುದಾನಕ್ಕೆ ಪೂರಕವಾಗಿ 1203 ವಿದ್ಯಾರ್ಥಿನಿಲಯ ಕಟ್ಟಡಗಳಿಗೆ ಅವಶ್ಯಕ ಕಾಮಗಾರಿಗಳಾದ ವಾಸದ ಕೊಠಡಿಗಳ ದುರಸ್ಥಿ, ಅಡುಗೆ ಕೋಣೆ ದುರಸ್ಥಿ, ಸ್ನಾನಗೃಹ ಮತ್ತು ಶೌಚಾಲಯಗಳ ದುರಸ್ಥಿ, ಪೇಂಟಿಂಗ್, ಕಿಟಕಿ ಮತ್ತು ಬಾಗಿಲುಗಳ ದುರಸ್ಥಿ ಹಾಗೂ ಎಲೆಕ್ಟ್ರಿಕಲ್ ದುರಸ್ಥಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಮುಖಾಂತರ ಕೈಗೊಳ್ಳಲಾಗಿರುತ್ತದೆ.<br><br>2025-26ನೇ ಸಾಲಿನ ಆಯವ್ಯಯ ಘೋಷಣೆಯಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ ಕಾರ್ಯಕ್ರಮದಡಿ ವಿದ್ಯಾರ್ಥಿನಿಲಯಗಳ ಕಟ್ಟಡ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.25.00 ಕೋಟಿಗಳನ್ನು ಒದಗಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ ಕಲಬುರಗಿ ವಿಭಾಗದ ಜಿಲ್ಲೆಗಳಲ್ಲಿ ಅವಶ್ಯವಿರುವ ವಿದ್ಯಾರ್ಥಿನಿಲಯಗಳ ಕಟ್ಟಡ ದುರಸ್ಥಿ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯ ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರದ ಮೂಲಕ ಕೈಗೊಳ್ಳಲು ಆದೇಶಿಸಲಾಗಿದೆ. ಇನ್ನುಳಿದ ವಿದ್ಯಾರ್ಥಿನಿಲಯ ಕಟ್ಟಡ ದುರಸ್ಥಿ ಕಾಮಗಾರಿಗಳಿಗೆ ಅಂದಾಜು ರೂ.200.00 ಕೋಟಿಗಳ ಅನುದಾನದ ಅವಶ್ಯಕತೆಯಿರುತ್ತದೆ. |
| ಈ) | ನಮ್ಮ ಅವಶ್ಯಕತೆಯನ್ನು ಪೂರೈಸಲು ಬೇಕಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು; ಅದಕ್ಕೆ ಬೇಕಿರುವ ಹಣ ಎಷ್ಟು; ಈಗಿರುವ ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಲಭ್ಯ ಪೂರ್ಣಗೊಳಿಸಲು ಬೇಕಿರುವ ಹಣ ಎಷ್ಟು; | ಶೈಕ್ಷಣಿಕ ಕೇಂದ್ರಗಳು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ವಿದ್ಯಾರ್ಥಿನಿಲಯಗಳಿಗೆ ಅತೀ ಹೆಚ್ಚಿನ ಬೇಡಿಕೆಯಿದ್ದು, ಸದರಿ ಬೇಡಿಕೆಗಳನ್ನು ಹಂತ ಹಂತವಾಗಿ ಪೂರೈಸಬೇಕಾಗಿರುತ್ತದೆ. ಪ್ರಸಕ್ತ ಸಾಲಿಗೆ 150 ಸಂಖ್ಯಾಬಲದ 300 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕೆ ಪ್ರಸ್ತಾಪಿಸಿದ್ದು, ಸದರಿ ವಿದ್ಯಾರ್ಥಿಗಳ ನಿರ್ವಹಣೆಗೆ ರೂ.354.72 ಕೋಟಿಗಳ ಅನುದಾನ ಅವಶ್ಯಕತೆಯಿರುತ್ತದೆ.<br><br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 2659 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ನಿಲಯಗಳಲ್ಲಿ |

<table>
<tr>
<td></td>
<td></td>
<td>250641 ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕಲ್ಪಿಸಲಾಗಿರುತ್ತದೆ. ಈವಿದ್ಯಾರ್ಥಿನಿಲಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ. ಪ್ರತಿ ಆರ್ಥಿಕ ವರ್ಷದಲ್ಲಿ ಒದಗಿಸುವ ಅನುದಾನದಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಕ್ರಮವಹಿಸಲಾಗುತ್ತಿದೆ, ಆದಾಗ್ಯೂ ನಿಲಯಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ಮಂಚಗಳು, ಹಾಸಿಗೆಗಳು, ಸೋಲಾರ್ ವಾಟರ್ ಹೀಟರ್, ಯುಪಿಎಸ್/ಜನರೇಟರ್, ವಾಟರ್ ಪ್ಯೂರಿಫಯರ್, ಕಂಪ್ಯೂಟರ್, ಪ್ರಿಂಟರ್, ಸಿಸಿ ಟಿವಿ, ಸ್ಮಾರ್ಟ್ ಟಿವಿ, ಗ್ರೈಂಡರ್‌ಗಳಂತ ಇತ್ಯಾದಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ರೂ.200.00 ಕೋಟಿಗಳ ಅನುದಾನ ಅವಶ್ಯವಿರುತ್ತದೆ. ಸದರಿ ಅನುದಾನವನ್ನು 2026-27ನೇ ಸಾಲಿನ ಆಯವ್ಯಯದಲ್ಲಿ ಒದಗಿಸುವಂತೆ ಪ್ರಸ್ತಾಪಿಸಿದೆ.</td>
</tr>
<tr>
<td>ಉ)</td>
<td>ಈಗಿರುವ ಹಾಸ್ಟೆಲ್‌ಗಳಲ್ಲಿ ಮೇಲ್ವಿಚಾರಕರ ಕೊರತೆ ಇದೆಯೇ; ಇದ್ದರೆ, ಎಷ್ಟು; ಇನ್ನೂ ಎಷ್ಟು ಜನರನ್ನು (ಮಹಿಳಾ ಮತ್ತು ಪುರುಷ) ನಿಯುಕ್ತಿ ಮಾಡಬೇಕು; ಸ್ವಚ್ಛತೆಗಾಗಿ ಸಿಬ್ಬಂದಿಗಳ ಕೊರತೆ ಇದೆಯೇ; ಸಿಬ್ಬಂದಿಗಳನ್ನು ಯಾವ ಆಧಾರದ ಮೇಲೆ ನಿಯುಕ್ತಿ ಮಾಡಲಾಗುತ್ತಿದೆ; ಅವರಿಗೆ ಕೊಡುವ ಸಂಬಳ ಎಷ್ಟು; ಅದು ಸಾಕಾಗುತ್ತದೆಯೇ; ಇಲ್ಲವಾದಲ್ಲಿ, ಎಷ್ಟು ಕೊಡಬೇಕು; ಅದಕ್ಕೆ ತಗಲುವ ವೆಚ್ಚ ಎಷ್ಟು;</td>
<td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಒಟ್ಟು 1597 ಬಾಲಕರ ಹಾಗೂ 998 ಬಾಲಕಿಯರ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ನಿಲಯಗಳಿಗೆ ಮಂಜೂರಾಗಿರುವ ಹಾಗೂ ಭರ್ತಿ ಆಗಿರುವ ನಿಲಯ ಪಾಲಕರು / ನಿಲಯ ಮೇಲ್ವಿಚಾರಕರು ಹುದ್ದೆಗಳ ವಿವರ ಕೆಳಕಂಡಂತಿರುತ್ತದೆ.
<table>
<tr><th>ವಿವರ</th><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>ನಿಲಯಪಾಲಕರು / ನಿಲಯ ಮೇಲ್ವಿಚಾರಕರು (ಪುರುಷ)</td><td>1597</td><td>751</td><td>846</td></tr>
<tr><td>ನಿಲಯಪಾಲಕರು / ನಿಲಯ ಮೇಲ್ವಿಚಾರಕರು (ಮಹಿಳೆ)</td><td>998</td><td>596</td><td>402</td></tr>
<tr><td>ಒಟ್ಟು</td><td>2595</td><td>1347</td><td>1248</td></tr>
</table>
<ul>
<li>ಖಾಲಿ ಇರುವ ಹುದ್ದೆಗಳ ಪೈಕಿ 106 ನಿಲಯ ಮೇಲ್ವಿಚಾರಕರ ಹುದ್ದೆ ಭರ್ತಿಗೆ ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.</li>
<li>ಉಳಿದಂತೆ 540-ನಿಲಯ ಮೇಲ್ವಿಚಾರಕರು (ಪುರುಷ) ಹಾಗೂ 283-ನಿಲಯ ಮೇಲ್ವಿಚಾರಕರು (ಮಹಿಳೆ) ಹುದ್ದೆಗಳ ಭರ್ತಿಗೆ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.</li>
<li>ವಸತಿನಿಲಯಗಳ ಸ್ವಚ್ಛತೆಗಾಗಿ ಯಾವುದೇ ಹುದ್ದೆಗಳು ಮಂಜೂರಾಗಿರುವುದಿಲ್ಲ.</li>
</ul>
ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಸರ್ಕಾರದಿಂದ ಶೌಚಾಲಯಗಳ/ಆವರಣದ ಸ್ವಚ್ಛತೆಗೆ ನಿಗಧಿಪಡಿಸಿರುವ ಅನುದಾನ ಪಾವತಿಸಿ ಸ್ವಚ್ಛತಾ ಸಿಬ್ಬಂದಿಯಿಂದ ಶೌಚಾಲಯಗಳ/ಆವರಣದ ಸ್ವಚ್ಛತೆಯನ್ನು ಮಾಡಿಸಲಾಗುತ್ತಿದೆ.<br><br>
ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಶೌಚಾಲಯಗಳ / ಆವರಣದ ಸ್ವಚ್ಛತೆಗೆ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಮಾಸಿಕವಾಗಿ ವೆಚ್ಚ ಮಾಡಲು ನಿಗಧಿಪಡಿಸಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿವೆ.</td>
</tr>
</table>

| | |
|---|---|
| 50 ಸಂಖ್ಯಾಬಲದ ವರೆಗೆ | ರೂ.1,000/- |
| 51 ರಿಂದ 100 ಸಂಖ್ಯಾಬಲದ ವರೆಗೆ | ರೂ.1,250/- |
| 101 ರಿಂದ 150 ರವರೆಗೆ | ರೂ.1,500/- |
| 151 ಕ್ಕೂ ಮೇಲ್ಪಟ್ಟು | ರೂ.2,000/- |
| ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಲು (ವಾರ್ಷಿಕ) | ರೂ.5,000/- |

ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸ್ವಚ್ಚತಾ ಸಾಮಗ್ರಿಗಳಿಗಾಗಿ ಖರೀದಿಗೆ ಮಾಸಿಕವಾಗಿ ವೆಚ್ಚ ಮಾಡಲು ನಿಗಧಿಪಡಿಸಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| 50 ಸಂಖ್ಯಾಬಲದ ವರೆಗೆ | ರೂ.500/ |
| 51 ರಿಂದ 100 ಸಂಖ್ಯಾಬಲದ ವರೆಗೆ | ರೂ.750/ |
| 101 ರಿಂದ 150 ರವರೆಗೆ | ರೂ.1,000/ |
| 151 ಕ್ಕೂ ಮೇಲ್ಪಟ್ಟು | ರೂ.1,250/ |

ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಶೌಚಾಲಯಗಳ / ಆವರಣದ ಸ್ವಚ್ಛತಾ ವೆಚ್ಚ, ಸೆಪ್ಟಿಕ್ ಟ್ಯಾಂಕ್‌ಗಳ ಸ್ವಚ್ಚತಾ ದರ ಹಾಗೂ ಸ್ವಚ್ಛತಾ ಸಾಮಗ್ರಿಗಳ ವೆಚ್ಚದ ದರಗಳು ಕಡಿಮೆ ಇದ್ದು ಸದರಿ ದರಗಳನ್ನು ಪರಿಷ್ಕರಿಸುವಂತೆ ಸಲ್ಲಿಸಿರುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯಿಂದ ತಿರಸ್ಕೃತಗೊಂಡಿರುತ್ತದೆ.

ಆರ್ಥಿಕ ಇಲಾಖೆಯಿಂದ ಸದರಿ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲು 2026-27ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲು ಉದ್ದೇಶಿಸಲಾಗಿದ್ದು, ದರಗಳನ್ನು ಹೆಚ್ಚಳ ಮಾಡಿದಲ್ಲಿ ಹೆಚ್ಚುವರಿಯಾಗಿ ರೂ.27.76 ಕೋಟಿಗಳ ಅನುದಾನದ ಅವಶ್ಯಕತೆಯಿರುತ್ತದೆ.

| ಕ್ರ. ಸಂ | ಸೌಲಭ್ಯಗಳ ವಿವರ | ಪ್ರಸ್ತುತ ದರಗಳು | ಹೆಚ್ಚಿಸ ಬೇಕಾಗಿರುವ ದರಗಳು |
|---|---|---|---|
| 1 | ಶೌಚಾಲಯಗಳ / ಆವರಣದ ಸ್ವಚ್ಛತೆ (ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಪ್ರತಿ ತಿಂಗಳಿಗೆ) | | |
| | 50 ಸಂಖ್ಯಾಬಲದವರೆಗೆ | 1000/ | 3000/- |
| | 51 ರಿಂದ 100 ರವರೆಗೆ | 1250/- | 5000/- |
| | 101 ರಿಂದ 150 ರವರೆಗೆ | 1500/- | 6000/- |
| | 151 ಕ್ಕೂಮೇಲ್ಪಟ್ಟು | 2000/- | 6000/- |
| 2 | ಸ್ವಚ್ಚತಾ ಸಾಮಗ್ರಿಗಳಿಗಾಗಿ (ಪ್ರತಿ ವಿದ್ಯಾರ್ಥಿನಿಲಯಕ್ಕೆ ಪ್ರತಿ ತಿಂಗಳಿಗೆ) | | |
| | 50 ಸಂಖ್ಯಾಬಲದವರೆಗೆ | 500/- | 2000/- |
| | 51 ರಿಂದ 100 ರವರೆಗೆ | 750/- | 3000/- |
| | 101 ರಿಂದ 150 ರವರೆಗೆ | 1000/- | 5000/- |
| | 151 ಕ್ಕೂಮೇಲ್ಪಟ್ಟು | 1250/- | 5000/- |
| 3 | ಸೆಪ್ಟಿಕ್ ಟ್ಯಾಂಕ್ ಮತ್ತು ಸಂಪ್ ಸ್ವಚ್ಛಗೊಳಿಸಲು (ವಾರ್ಷಿಕ) | 5000/- | 6000/- |

<table>
<tr>
<td>ಊ)</td>
<td>ಹಾಸ್ಟೆಲ್‌ಗಳ ಸಮಗ್ರ ನಿರ್ವಹಣೆ, ಮೇಲ್ವಿಚಾರಕರು, ಆಹಾರ ತಯಾರಿಕಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ರಕ್ಷಣಾ ವ್ಯವಸ್ಥೆ ಸಿಬ್ಬಂದಿ ಸೇರಿದಂತೆ ಸಮಗ್ರ ವಿವರಗಳನ್ನು ನೀಡುವುದು?</td>
<td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಒಟ್ಟು 1597 ಬಾಲಕರ ಹಾಗೂ 998 ಬಾಲಕಿಯರ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ನಿಲಯಗಳಿಗೆ ಮಂಜೂರಾಗಿರುವ ಹಾಗೂ ಭರ್ತಿ ಆಗಿರುವ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ಕಾವಲುಗಾರರ ಹುದ್ದೆಗಳ ವಿವರ ಕೆಳಕಂಡಂತಿರುತ್ತದೆ.<br>
<table>
<tr><th>ವಿವರ</th><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>ಅಡುಗೆಯವರು</td><td>5527</td><td>3702</td><td>1825</td></tr>
<tr><td>ಅಡುಗೆ ಸಹಾಯಕರು</td><td>5199</td><td>948</td><td>4251</td></tr>
<tr><td>ಕಾವಲುಗಾರರು (ಬಾಲಕಿಯರ ನಿಲಯಗಳಿಗೆ ಮಾತ್ರ)</td><td>998</td><td>17</td><td>981</td></tr>
<tr><td>ಒಟ್ಟು</td><td>11724</td><td>4667</td><td>7057</td></tr>
</table>
ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲದಿಂದ ನೇಮಕ ಮಾಡಿಕೊಂಡು ನಿಲಯಗಳನ್ನು ನಿರ್ವಹಿಸಲಾಗುತ್ತಿದೆ.</td>
</tr>
</table>

ಸಂಖ್ಯೆ:ಹಿಂವಕ **108 ಬಿಎಂಎಸ್ 2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು